ಶ್ರೀ ಹೆಚ್. ಸಿ. ಬಾಲಕೃಷ್ಣ : ಮಾನ್ಯ ಅಧ್ಯಕ್ಷರೆ, ಅಗ್ನಿಶಾಮಕ ಠಾಣೆಯನ್ನು ಮಾಗಡಿಯಲ್ಲಿ ಪ್ರಾರಂಭ ಮಾಡುವುದಕ್ಕೆ ಸರಕಾರ ಪರಿಶೀಲನೆ ಮಾಡಿದೆಯೇ ಎಂದು ಪ್ರಶ್ನೆ ಕೇಳಿದ್ದಕ್ಕೆ "ಹೌದು" ಎಂದು ಉತ್ತರ ಕೊಟ್ಟಿದ್ದಾರೆ ಸರಕಾರದ ಆದೇಶದ ನಂಬರ್ ಅನ್ನೂ ಕೂಡ ಇಲ್ಲಿ ಕೊಟ್ಟಿದ್ದಾರೆ. ಇನ್ನೊಂದು ಪ್ರಶ್ನೆಯಲ್ಲಿ ನೀವು ಯಾವಾಗ ಪ್ರಾರಂಭ ಮಾಡುತ್ತೀರಿ ಎಂದು ಹೇಳಿದರೆ ಪ್ರಾರಂಭಿಸುವ ಪ್ರಸ್ತಾವನೆ ಸರಕಾರದ ಹಂತದಲ್ಲಿ ಪರಿಶೀಲನೆಯಲ್ಲಿ ಇದೆ ಎಂದು ಹೇಳಿದ್ದಾರೆ. ಅದರ ಬಗ್ಗೆ ಮಾನ್ಯ ಸಚಿವರು ಕ್ಲಾರಿಫೈ ಮಾಡಬೇಕು. ಪುರಸಭೆಯವರು ನಮಗೆ ಜಾಗವನ್ನು ಕೊಟ್ಟಿಲ್ಲವೆಂದು ಹೇಳಿದ್ದಾರೆ. ಈಗಾಗಲೇ ಪುರಸಭೆಯವರು ರೆಸಲ್ಯೂಷನ್ ಮಾಡಿ 2 ಎಕರೆ ಜಾಗವನ್ನು ತೆಗೆದುಕೊಳ್ಳಿ ಎಂದು ಬರೆದಿದ್ದಾರೆ. ಇದರ ಬಗ್ಗೆ ನನಗೆ ಪುರಸಭೆಯವರಿಂದ ಬಂದಿದೆ. ಒಂದು ವೇಳೆ ಅದು ಆಗಿಲ್ಲದೇ ಹೋದರೆ ಇನ್ನು ಒಂದು ತಿಂಗಳಲ್ಲಿ ಆ ಜಾಗವನ್ನು ನಾನು ಕೊಡಿಸುತ್ತೇನೆ ಅದನ್ನು ತಕ್ಷಣ ಪ್ರಾರಂಭ ಮಾಡುತ್ತೀರಾ ಎಂದು ಮಾನ್ಯ ಮಂತ್ರಿಗಳಲ್ಲಿ ಕೇಳುತ್ತೇನೆ.

ಅಧ್ಯಕ್ಷರು : ಜಾಗ ಕೊಡಿಸಿದರೆ ಮಾಡಲಿಕ್ಕೆ ಕಷ್ಟವೇನು?

ಶ್ರೀ ವಿ. ಸೋಮಣ್ಣ : ಮಾನ್ಯ ಅಧ್ಯಕ್ಷರೆ, 1993ರಲ್ಲಿ ನಾವು ಮಾಗಡಿ ತಾಲ್ಲೂಕಿನಲ್ಲಿ ಒಂದು ಅಗ್ನಿಶಾಮಕ ಠಾಣೆ ಮಾಡಬೇಕೆಂದು ಮಂಜೂರಾತಿ ದೊರಕಿದೆ. 4.10.95ರಲ್ಲಿ ಮಾಗಡಿ ಪುರಸಭೆಯವರಿಗೆ ಪತ್ರ ಬರೆದಿದ್ದೇವೆ ಅವರಿಂದ ಉತ್ತರ ಬಂದಿಲ್ಲ. ಮತ್ತೆ8.7.96ರಲ್ಲಿ ಜಿಲ್ಲಾಧಿಕಾರಿಗಳಿಗೆ ಪತ್ರ ಬರೆದು ಸರಕಾರದ ಜಮೀನು ಇದ್ದರೆ ಕೊಡಿ ಎಂದು ಕೇಳಿದ್ದೇವೆ. ಅವರು ಸರಕಾರದ ಜಮೀನು ಯಾವುದೂ ಇಲ್ಲವೆಂದು ಹೇಳಿದ ಮೇಲೆ ಸ್ಮಾಲ್ ಸ್ಕೇಲ್ ಇಂಡಸ್ಟ್ರೀಸ್ ಅವರಿಗೆ ಮನವಿ ಮಾಡಿದ ಮೇಲೆ ಅವರು ಅರ್ಧ ಎಕರೆ ಜಮೀನನ್ನು ನಾವು ಕೊಡುತ್ತೇವೆ 2 ಲಕ್ಷದ 2050 ರೂಪಾಯಿಯನ್ನು ನೀವು ಕಟ್ಟಿ ಎಂಬ ಪ್ರಸ್ತಾವನೆ ಕಳುಹಿಸಿದರು. ಅದು ನಮ್ಮ ಮುಂದಿದೆ. ಅರ್ಧ ಎಕರೆಯಲ್ಲಿ ಮಾಡುವುದಕ್ಕೆ ಸಾಧ್ಯವಿಲ್ಲವೆಂದು ನಮ್ಮ ಅಧಿಕಾರಿಗಳಿಗೆ ತಿಳಿಸಿದ್ದೇನೆ. ಅರ್ಧ ಎಕರೆಯಲ್ಲಿ ಮಾಡುವುದಕ್ಕೆ ಆದರೆ ಮಾಡುತ್ತೇವೆ. ಇಲ್ಲವಾದಲ್ಲಿ ತಮ್ಮ ಮುಖೇನ.....

ಅಧ್ಯಕ್ಷರು : ಒಂದು ತಿಂಗಳಲ್ಲಿ ನಾನು ಜಾಗ ಕೊಡಿಸುತ್ತೇನೆಂದು ಮಾನ್ಯ 'ಸದಸ್ಯರು ಹೇಳುತ್ತಿದ್ದಾರೆ. ನೀವು ಜಾಗ ಕೊಡಿಸಿ....

ಶ್ರೀ ವಿ. ಸೋಮಣ್ಣ : ಅವರು ಜಾಗ ಕೊಡಿಸುತ್ತೇವೆಂದು ಹೇಳುತ್ತಲೇ ಇದ್ದಾರೆ. ನಾನು ಅವರಿಗೆ ಹೇಳುತ್ತಿದ್ದೇನೆ. ಅವರು ನಾಳೆ ಬೆಳಿಗ್ಗೆ ಜಾಗ ಕೊಟ್ಟರೆ ತಕ್ಷಣ ಶುರು ಮಾಡಿಸುತ್ತೇನೆ.

ಬೆಂಗಳೂರು ನಗರ ಪಾಲಿಕೆಯವರು ಕಸವನ್ನು ಸಾಗಿಸುವ ವಿಚಾರ

454 - ಶ್ರೀ ಪ್ರಕಾಶ್ ಪಿ. ಎಸ್. (ಚಿಕ್ಕಪೇಟೆ) : ಮಾನ್ಯ ಬೆಂಗಳೂರು ಅಭಿವೃದ್ಧಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ನಗರ ಪಾಲಿಕೆಯವರು ಕಸವನ್ನು ಎಷ್ಟು ದಿನಗಳಿಗೊಮ್ಮೆ ಲಾರಿಗಳ ಮೂಲಕ ಸಾಗಿಸುತ್ತಾರೆ?

ಅ) *ಬೆಂಗಳೂರು ಮಹಾನಗರ ಪಾಲಿಕೆಯಲ್ಲಿರುವ ಕಸವನ್ನು ತೆಗೆದುಕೊಂಡು ಹೋಗುವ ಲಾರಿಗಳ ಸಂಖ್ಯೆ ಎಷ್ಟು ?*

ಇ) *ಖಾಸಗಿ ಲಾರಿಗಳ ಮೂಲಕ ಕಸವನ್ನು ತೆಗೆದುಕೊಂಡು ಹೋಗುವ ಲಾರಿಗಳ ಸಂಖ್ಯೆ ಎಷ್ಟು ? ಹಾಗೂ ಕಸವನ್ನು ತೆಗೆದುಕೊಂಡು ಹೋಗುಲು ಅವರಿಗೆ ನಿಗದಿಪಡಿಸಿದ ಮೊತ್ತ ಎಷ್ಟು ?*

ಶ್ರೀ ಅನಂತನಾಗ್ (ಬೆಂಗಳೂರು ನಗರ ಅಭಿವೃದ್ಧಿ ಸಚಿವರು) :

ಅ) ಪ್ರತಿದಿನ

ಆ) 258 ಲಾರಿಗಳು

ಇ) 64 ಲಾರಿಗಳು ಪ್ರತಿದಿನಕ್ಕೆ ರೂ. 800-00

ಶ್ರೀ ಪಿ. ಎಸ್. ಪ್ರಕಾಶ್ : ಮಾನ್ಯ ಅಧ್ಯಕ್ಷರೆ, ಈ ಬೆಂಗಳೂರು ನಗರದಲ್ಲಿ ಪ್ರತಿದಿನ ಕಸ ತೆಗೆಯುವ ಕಾರ್ಯಕ್ರಮ ಕಾರ್ಪೊರೇಷನ್‌ನಲ್ಲಿ ಇದೆಯೇ ಎಂದು ಕೇಳಿದ್ದಕ್ಕೆ ಉತ್ತರದಲ್ಲಿ 'ಇದೆ' ಎಂದು ಹೇಳುತ್ತಾರೆ. ಕಲೆಕ್ಟಿಂಗ್ ಪಾಯಿಂಟ್ ಎಲ್ಲಿದೆ, ಅಂಥ ಕಡೆ ಇರುವ ಕಸವನ್ನು ತೆಗೆದು ಅಲ್ಲಿ ಹಾಕುತ್ತಾರೆ. ಅದನ್ನು ಬೆಂಗಳೂರು ನಗರ ಹೊರವಲಯದಲ್ಲಿ ತೆಗೆದುಕೊಂಡು ಹೋಗಿ ಹಾಕಬೇಕು. ಹಾಗೆ ಅದನ್ನು ತೆಗೆದುಕೊಂಡು ಹೋಗಿ ಹಾಕುತ್ತಿಲ್ಲ. ವಾರಕ್ಕೆ ಒಂದು ಸಾರಿ ತೆಗೆದುಕೊಂಡು ಹೋಗಿ ಹಾಕುತ್ತಿದ್ದಾರೆ. ಇದು ಮಾನ್ಯ ನಗರಾಭಿವೃದ್ಧಿ ಮಂತ್ರಿಗಳ ಗಮನಕ್ಕೆ ಬಂದಿದೆಯೋ ಇಲ್ಲವೋ ಗೊತ್ತಿಲ್ಲ. 15 ದಿವಸವಾದರೂ ಒಂದು ಕಡೆ ಕಸವನ್ನು ಎತ್ತುವುದಿಲ್ಲ. ಪ್ರತಿ ದಿನ ಜನರು ಬೆಳಿಗ್ಗೆ ಫೋನ್ ಮಾಡಿ ನಮ್ಮನ್ನು ಹೀನಾಮಾನವಾಗಿ ಬಯ್ಯುತ್ತಾರೆ. ಕಸದಲ್ಲಿ ಹುಳುಗಳು ಬಿದ್ದಿರುತ್ತವೆ. ಅದನ್ನು ಎತ್ತುವುದಕ್ಕೆ ಕಾರ್ಪೊರೇಷನ್‌ನವರ ಕೈಯಲ್ಲಿ ಆಗುತ್ತಿಲ್ಲ. ಮತ್ತೆ 268 ಲಾರಿಗಳು ಓಡುತ್ತಿದೆ ಎಂದು ಹೇಳಿದ್ದಾರೆ. 268 ಲಾರಿಗಳಲ್ಲ, 150 ಲಾರಿಗಳೂ ಕೂಡ ಬೆಂಗಳೂರು ನಗರದಲ್ಲಿ ಓಡುತ್ತಿಲ್ಲ. ಮೊದಲು ಡಿವಿಜನ್ ಎಂದು ಇತ್ತು. ಈಗ ವಾರ್ಡ್ ಮಾಡಿ ದೊಡ್ಡದು ಮಾಡಿದ್ದಾರೆ. ಒಂದು ವಾರ್ಡ್‌ನಲ್ಲಿ ಒಂದು ಲಾರಿಯೂ ಇಲ್ಲ. ಆ ಪರಿಸ್ಥಿತಿ ಬಂದಿದೆ ಟ್ರ್ಯಾಕ್ಟರ್‌ಗಳನ್ನು ಇಟ್ಟುಕೊಂಡಿದ್ದಾರೆ. ಇದರ ಜೊತೆಗೆ ಖಾಸಗಿಯವರದು 64 ಲಾರಿಗಳೂ ಕೂಡ ಓಡುತ್ತಿವೆ ಎಂದಿದ್ದಾರೆ. ಇವುಗಳಿಗೆ ಒಂದು ದಿನಕ್ಕೆ 800 ರೂಪಾಯಿ ಕೊಡುತ್ತೇವೆ ಎಂದು ಹೇಳಿದ್ದಾರೆ. ಬೆಂಗಳೂರು ನಗರಪಾಲಿಕೆಯಲ್ಲಿ ನಗರಪಾಲಿಕೆ ಸದಸ್ಯರಾಗಿರುವವರೇ ಅವರೇ ಲಾರಿಗಳನ್ನು ಇಟ್ಟುಕೊಂಡು ಅವರ ಕುಟುಂಬದವರ ಹೆಸರಿನಲ್ಲಿ ಅಪ್ರೂವಲ್ ಮಾಡಿಸಿಕೊಂಡು ಕಂಟ್ರಾಕ್ಟ್ ತೆಗೆದುಕೊಂಡು ಮೂರು ದಿವಸಕ್ಕೆ ಒಂದು ಸಾರಿ ಕಸವನ್ನು ಎತ್ತುತ್ತಿದ್ದಾರೆ. ಮತ್ತೆ ಪ್ರತಿ ದಿನವೂ 800 ರೂಪಾಯಿ ಬಿಲ್ ಎಂದು ಹೇಳಿ ದಿವಸ ವೋಚರ್ ಹಾಕಿಸಿಕೊಂಡು ಸಂಬಂಧಪಟ್ಟ ಆರೋಗ್ಯಾಧಿಕಾರಿಗಳ ಹತ್ತಿರ ಬರೆಸಿಕೊಂಡು ಹೋಗುತ್ತಿದ್ದಾರೆ. ಅವರು ಬರೆದುಕೊಡುವುದಿಲ್ಲ ಎಂದರೆ ಅವರ ಮೇಲೆ ಇಲ್ಲದೇ ಇರುವ ಆಪಾದನೆಗಳನ್ನು ಮಾಡಿ ಹೆದರಿಸಿಯಾದರೂ ಬರೆಸಿಕೊಂಡು ಹೋಗುತ್ತಾರೆ. ಈ ರೀತಿಯಾಗಿ ಬೆಂಗಳೂರು ನಗರದಲ್ಲಿ ವ್ಯಾಪಕವಾಗಿ ಸರಿಯಾದ ರೀತಿಯಲ್ಲಿ ಕಸ ಕಡ್ಡಿ ಸಾಗಾಣೆಯಾಗುತ್ತಿಲ್ಲ. ಲಾರಿಗಳು ಸರಿಯಾಗಿ

ಕಾಲಕಾಲಕ್ಕೆ ಬರುತ್ತಿಲ್ಲ. ಮತ್ತೆ ಖಾಸಗಿಯವರಿಗೆ ಕೊಟ್ಟಿರುವ ವಾಹನಗಳವರೂ ಕೂಡ ಮೂರು ದಿವಸಕ್ಕೆ ನಾಲ್ಕು ದಿವಸಕ್ಕೆ ಒಂದು ಬಾರಿ ಕಸವನ್ನು ಎತ್ತುತ್ತಿದ್ದಾರೆ. ಪ್ರತಿದಿನ ಎತ್ತುತ್ತಿಲ್ಲ. ಇದರ ಬಗ್ಗೆ ಮಾನ್ಯ ನಗರಾಭಿವೃದ್ಧಿ ಮಂತ್ರಿಗಳ ಬಗ್ಗೆ ನಾನು ಅವರ ಗಮನವನ್ನು ಸೆಳೆಯುತ್ತಿದ್ದೇನೆ.

ಅಧ್ಯಕ್ಷರು : ಗಮನ ಸೆಳೆಯುವುದಲ್ಲ. ಇದು ಪ್ರಶ್ನೋತ್ತರ. ಪ್ರಶ್ನೋತ್ತರದಲ್ಲಿ ನೀವು ಉಪಪ್ರಶ್ನೆಯಷ್ಟೇ ಕೇಳಬೇಕಾಗಿದೆ. ಭಾಷಣವನ್ನೇ ಮಾಡಿದಿರಿ ಆಯಿತು.

ಶ್ರೀ ಅನಂತನಾಗ್ : ಮಾನ್ಯ ಅಧ್ಯಕ್ಷರೇ, ಕೆಲವು ಕಡೆ ಮಾನ್ಯ ಸದಸ್ಯರು ಹೇಳಿದಹಾಗೆ ಆಗಿದೆ. ಎಲ್ಲಾ ಲಾರಿಗಳು ಎಲ್ಲಾ ಸಮಯದಲ್ಲಿ ಓಡಾಡುತ್ತವೆ, ಕಸವನ್ನು ಸಾಗಿಸುತ್ತವೆ ಎಂದು ನಾನು ಹೇಳುತ್ತಿಲ್ಲ. ಆದರೂ ಕೂಡ ಅವರು ಹೇಳಿದ್ದರಲ್ಲಿ ಕೆಲವರು ನಗರಪಾಲಿಕೆ ಸದಸ್ಯರೇ ಕಂಟ್ರಾಕ್ಟ್‌ಗಳನ್ನು ತೆಗೆದುಕೊಂಡಿದ್ದಾರೆ ಎಂದು ಅವರು ಹೇಳಿದ್ದಾರೆ. ಅದರಲ್ಲೂ ಕೆಲವು ಕಡೆ ಸತ್ಯಾಂಶ ಇದೆ. ಮುಂದಿನ ಸಲ ಕಂಟ್ರಾಕ್ಟ್‌ಗಳನ್ನು ಕೊಡುವುದಕ್ಕೆ ಮುಂಚೆ ಸೂಕ್ತವಾದ ಕ್ರಮ ಕೈಗೊಂಡು ಇದನ್ನು ತಪ್ಪಿಸುತ್ತೇನೆ ಎಂದು ಹೇಳುತ್ತೇನೆ. ಇಲ್ಲಿ ಏನು ಅವರು ಕಂಪ್ಲೇಂಟನ್ನು ಕೊಟ್ಟಿದ್ದಾರೆ, ನಿನ್ನೆಯಿಂದಲೇ ಒಂದು ಹೊಸ ವ್ಯವಸ್ಥೆಯನ್ನು ಬೆಂಗಳೂರು ನಗರಪಾಲಿಕೆಯವರು ಮಾಡಿಕೊಂಡಿದ್ದಾರೆ. ಈ ಕಸ ಸಾಗಾಣಿಕೆ ವಿಚಾರಗಳಲ್ಲಿ 48 ಗಂಟೆಗಳಲ್ಲಿ ಎಲ್ಲೆಲ್ಲಿ ಕಂಪ್ಲೇಂಟ್ಸ್‌ಗಳು ಬರುತ್ತವೆ, ಅಲ್ಲಿ ಅವುಗಳನ್ನು ಅಟೆಂಡ್ ಮಾಡುವ ಒಂದು ವ್ಯವಸ್ಥೆಯನ್ನು ಮಾಡಲಾಗಿದೆ. ಅದಕ್ಕೆ "ನಾಗರೀಕ ಸಮಸ್ಯೆಗಳ ನಿವಾರಣಾ" ಎನ್ನುವ ಕಾರ್ಯಕ್ರಮಗಳನ್ನು ನಿನ್ನೆಯಿಂದ ತಾನೇ ಪ್ರಾರಂಭವಾಗಿದೆ. ಮುಂದಿನ ದಿನಗಳಲ್ಲಿ ನಮ್ಮ ಸದಸ್ಯರು ಹೇಳಿದಂಥ ಒಂದು ಪರಿಸ್ಥಿತಿ ಇರದಂತೆ ನಾವು ನೋಡಿಕೊಳ್ಳುತ್ತೇವೆ ಎಂದು ನಾನು ತಮ್ಮೂಲಕ ಅವರಿಗೆ ತಿಳಿಸುವುದಕ್ಕೆ ಬಯಸುತ್ತೇನೆ.

ಶ್ರೀ ಎಸ್. ಸುರೇಶ್ ಕುಮಾರ್ : ಸನ್ಮಾನ್ಯ ಸಭಾಧ್ಯಕ್ಷರೇ, ಈ ಖಾಸಗಿ ಲಾರಿಗೆ ಒಂದು ದಿವಸಕ್ಕೆ 800 ರೂಪಾಯಿ ಕೊಡುತ್ತೇವೆ ಎಂದು ಉತ್ತರದಲ್ಲಿ ಹೇಳಿದ್ದಾರೆ. ಅಂದರೆ ಒಂದು ತಿಂಗಳಿಗೆ 24 ಸಾವಿರ ರೂಪಾಯಿಯಾಯಿತು. ನಗರಪಾಲಿಕೆಯದೇ ಲಾರಿಯಾಗಿದ್ದರೆ ಒಂದು ಲಾರಿಗೆ ಎಷ್ಟು ಖರ್ಚಾಗುತ್ತಿತ್ತು? ಕಸ ಸರಿಯಾಗಿ ಎತ್ತದ ಖಾಸಗಿ ಲಾರಿಗಳ ಮೇಲೆ ನೀವೇನಾದರೂ ದಂಡವನ್ನು ವಿಧಿಸುತ್ತೀರಾ? ಈ ಟೆಂಡರ್ ಏನು ಕರೆದಿದ್ದಾರೆ, ಆ ಟೆಂಡರ್ ನಿಯಮಗಳನ್ನು ಉಲ್ಲಂಘಿಸಿದವರ ಮೇಲೆ ಆ ಕಂಟ್ರಾಕ್ಟ್‌ನ್ನು ರದ್ದು ಮಾಡುತ್ತೀರಾ? ಬೆಂಗಳೂರಿನಲ್ಲಿ ಕಸದ ಡಿಸ್‌ಪೋಸಲ್ ಆಗುತ್ತಿದೆಯೋ? ಕಸದ ಡಿಸ್‌ಪೋಸಲ್ ಆಗುತ್ತಿದೆಯೋ? ಕಸವನ್ನೂ ಕೂಡ ಪ್ಲಾಸ್ಟಿಕ್ ಕವರ್ ಹೊದಿಕೆ ಹಾಕದೇ ತೆಗೆದುಕೊಂಡು ಹೋಗುತ್ತಿದ್ದಾರೆ. ನಮ್ಮ ಟೆಂಡರ್‌ನಲ್ಲಿ ಕಂಡೀಷನ್ ಇದೆ. ಪೂರ್ತಿ ಕವರ್ ಇರುವ ಲಾರಿಯಲ್ಲಿ ಕಸವನ್ನು ತೆಗೆದುಕೊಂಡು ಹೋಗಬೇಕು ಎಂದು. ಇಡೀ ರಸ್ತೆಯಲ್ಲಿ ಕಸವನ್ನು ವಿತರಿಸುವ ಕೆಲಸವನ್ನು ಸುಗಮವಾಗಿ ಮಾಡುತ್ತಿದ್ದಾರೆ. ಇದರ ಬಗ್ಗೆ ಸರ್ಕಾರ ಏನು ಕ್ರಮವನ್ನು ತೆಗೆದುಕೊಂಡಿದೆ?

ಶ್ರೀ ಅನಂತನಾಗ್ : ಮಾನ್ಯ ಅಧ್ಯಕ್ಷರೇ, ಇಲ್ಲಿ ಕಸವನ್ನು ಸಾಗಿಸುವುದಕ್ಕೆ ಕೆಲವು ಕಡೆ ಎಲ್ಲಾ ವ್ಯವಸ್ಥೆಗಳು ಇವೆ. 13 ಡಂಪರ್ ಪ್ಲೇಸರ್‌ಗಳು ಕಂಪ್ಯಾಕ್ಟ್‌ಗಳು ಎಲ್ಲಾ ಇವೆ. ಆದರೂ ಕೆಲವೊಮ್ಮೆ

ನಿರ್ಲಕ್ಷ್ಯದಿಂದ ಇಂಥದ್ದು ಆಗುತ್ತದೆ. ಅದಕ್ಕೆ ನಾನು ಸದಸ್ಯರಲ್ಲಿ ತಮ್ಮೂಲಕ ಕೇಳಿಕೊಳ್ಳುವುದು ಒಂದು ಹೊಸ ವ್ಯವಸ್ಥೆಯನ್ನು ನಿನ್ನೆಯಿಂದ ತಾನೇ ಪ್ರಾರಂಭ ಮಾಡಿದ್ದೇವೆ. Within 48 hours, any such problems will be attended to ಅದರಿಂದ ಸ್ವಲ್ಪ ಅವಕಾಶವನ್ನು ಕೊಟ್ಟು ನೋಡಿ. We are covering the lorry loaded with garbageಗೆ ಟಾರ್ಪಾಲಿನ್ ಮುಂತಾದವುಗಳನ್ನು ಹಾಕಿ ಎಲ್ಲಾ ಲಾರಿಗಳನ್ನು ಕವರ್ ಮಾಡುತ್ತಿದ್ದೇವೆ. Just yesterday, the whole new programme has started. ಅಂದರೆ ಎಲ್ಲಾ ಕಡೆ ಕಸ ಸಾಗಾಣಿಕೆ ಮುಂತಾದ ಕಡೆ 48 ಗಂಟೆಗಳಲ್ಲಿ ಅವರು ಅದನ್ನು ಅಟೆಂಡ್ ಮಾಡಬೇಕು. ರಸ್ತೆ ಮತ್ತು ಮಳೆ ನೀರಿನ ಚರಂಡಿ ದುರಸ್ತಿ ಒಂದು ವಾರದೊಳಗೆ, ಪಾದಚಾರಿಗಳ ರಸ್ತೆಗಳ ನಿರ್ವಹಣೆ ಎರಡು ದಿವಸದಲ್ಲಿ, ರಸ್ತೆ ಗುಂಡಿಗಳ ದುರಸ್ಥಿ 24 ಗಂಟೆಗಳಲ್ಲಿ ಹೀಗೆ ಟೈಮ್ ಲಿಮಿಟ್ ಹಾಕಿಕೊಂಡು ಕೆಲಸ ಮಾಡುವ ಒಂದು ಕಾರ್ಯಕ್ರಮ ನಿವಾರಣೆ ಎಂದು ನಿನ್ನೆಯಿಂದ ಪ್ರಾರಂಭವಾಗಿದೆ. ನಾನು ಆಶಿಸುತ್ತಿದ್ದೇನೆ, ಈ ರೀತಿಯ ಸಮಸ್ಯೆ ಇನ್ನು ಮುಂದೆ ಬರಲಾರದು ಎಂದು

MR. SPEAKER : Wish you all the best.

ವಿರಾಜಪೇಟೆ ತಾಲ್ಲೂಕು ಕೊಂಗಣ ಏತ ನೀರಾವರಿ

455 - ಶ್ರೀ ಹೆಚ್. ಬಸವರಾಜು (ವಿರಾಜಪೇಟೆ) : ಮಾನ್ಯ ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ವಿರಾಜಪೇಟೆ ತಾಲ್ಲೂಕು ಕೊಂಗಣ ಏತ ನೀರಾವರಿ ಯೋಜನೆ ಅನುಷ್ಠಾನಗೊಳಿಸಲು ಸರ್ಕಾರ ಯಾರ ಕಾರ್ಯಕ್ರಮ ಹಾಕಿಕೊಂಡಿದೆ?

ಆ) ಈ ಯೋಜನೆಯು ಯಾವ ಹಂತದಲ್ಲಿದೆ?

ಇ) ಸದರಿ ಯೋಜನೆ ಕೈಗೊಳ್ಳಲು ಅಂದಾಜು ವೆಚ್ಚ ಎಷ್ಟಾಗುತ್ತದೆ? ಈ ಯೋಜನೆಗೆ ಸರ್ಕಾರ ಎಷ್ಟು ಹಣ ವೆಚ್ಚ ಮಾಡಲು ನಿರ್ಧರಿಸಿದೆ? (ಈ ಬಗೆಗಿನ ಕಾರ್ಯಸೂಚಿ ನೀಡುವುದು)

ಶ್ರೀ ತಿಪ್ಪೇಸ್ವಾಮಿ (ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಸಚಿವರು) :

ಅ) ಯಾವ ಕಾರ್ಯಕ್ರಮವನ್ನೂ ಹಾಕಿಕೊಂಡಿಲ್ಲ. ಪರಿಶೀಲಿಸಲಾಗುತ್ತಿದೆ.

ಆ) ಈ ಯೋಜನೆಯ ಪೂರ್ವಭಾವಿ ತನಿಖೆಯನ್ನು ನಡೆಸಬೇಕಾಗಿದೆ.

ಇ) ಈ ಕಾಮಗಾರಿಯ ಅಂದಾಜು ಪಟ್ಟಿ ಇನ್ನೂ ತಯಾರಾಗಬೇಕಾಗಿದೆ.

ಶ್ರೀ ಹೆಚ್. ಡಿ ಬಸವರಾಜು : ಮಾನ್ಯ ಅಧ್ಯಕ್ಷರೇ, ಉತ್ತರದಲ್ಲಿ ನಾನು ಕೇಳಿರುವ ಪ್ರಶ್ನೆ ಕೊಂಗಣ ಏತ ನೀರಾವರಿ ಬಗ್ಗೆ ಕೇಳಿದ್ದೇನೆ. ಈ ಕಾರ್ಯಕ್ರಮವನ್ನು ಹಾಕಿಕೊಂಡಿಲ್ಲ, ಪರಿಶೀಲಿಸ